**ಕರ್ನಾಟಕ ಸರ್ಕಾರದ ನಡವಳಿಗಳು**

(22)

**ವಿಷಯ:** ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಪುನರ್ ಸಂಘಟಿಸಿದ ನಂತರ ಮುಂದುವರೆದ ಕ್ರಮ – ಉಪ ಕೃಷಿ ನಿರ್ದೇಶಕರು–1 ಮತ್ತು 2ರ ಕೇಂದ್ರ ಸ್ಥಾನ ಮತ್ತು ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಕೃಇ 166 ಕೃಪಸೇ 2014, ದಿನಾಂಕ: 08–07–2014.

2) ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ–2/ಲಿಪಿಕ/ವಿವ–34/2011–12. ದಿನಾಂಕ:01–10–2014.

*********

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ:08–07–2014ರ ಸರ್ಕಾರದ ಆದೇಶದಲ್ಲಿ 29 ಜಿಲ್ಲೆಗಳಲ್ಲಿ ಉಪ ಕೃಷಿ ನಿರ್ದೇಶಕರು–1 ಮತ್ತು 22 ಜಿಲ್ಲೆಗಳಲ್ಲಿ ಉಪ ಕೃಷಿ ನಿರ್ದೇಶಕರು–2 ಕಛೇರಿಗಳನ್ನು ಸ್ಥಾಪಿಸಲು ಆದೇಶಿಸಿದೆ. ಈ ಹುದ್ದೆಗಳಿಗೆ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇವರು ಕಾರ್ಯಾರಂಭ ಮಾಡಲು ಇವರುಗಳ ಕೇಂದ್ರಸ್ಥಾನ ಮತ್ತು ಈ ಕಛೇರಿಗಳ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಬೇಕಾಗಿರುತ್ತದೆ. ಸರ್ಕಾರದ ದಿನಾಂಕ:08–07–2014ರ ಆದೇಶದ ಅನುಬಂಧ–III(C)ನಲ್ಲಿ, 22 ಉಪ ಕೃಷಿ ನಿರ್ದೇಶಕರು–2 ಕಛೇರಿಗಳ ಪೈಕಿ 17 ಜಿಲ್ಲೆಗಳಲ್ಲಿ ಇವರ ಕೇಂದ್ರಸ್ಥಾನವನ್ನು ಕಂದಾಯ ಉಪವಿಭಾಗಗಳ ಸ್ಥಳಗಳಲ್ಲಿ ನಿಗದಿಪಡಿಸಿದೆ. ಉಳಿದ 05 ಜಿಲ್ಲೆಗಳಲ್ಲಿ ಕಂದಾಯ ಉಪವಿಭಾಗವಲ್ಲದ ತಾಲ್ಲೂಕುಗಳಲ್ಲಿ ನಿಗದಿಪಡಿಸಿದೆ. ಆದುದರಿಂದ ಕಂದಾಯ ಉಪವಿಭಾಗಗಳಿರುವ ಬಿಜಾಪುರ ಜಿಲ್ಲೆಯಲ್ಲಿ ಮುದ್ದೇಬಿಹಾಳಕ್ಕೆ ಬದಲಾಗಿ ಇಂಡಿ, ದಾವಣಗೆರೆ ಜಿಲ್ಲೆಯಲ್ಲಿ ಚನ್ನಗಿರಿ ತಾಲ್ಲೂಕಿಗೆ ಬದಲಾಗಿ ಹರಪನಹಳ್ಳಿ, ಮಂಗಳೂರು ಜಿಲ್ಲೆಯಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ ಬದಲಾಗಿ ಪುತ್ತೂರು, ಧಾರವಾಡ ಜಿಲ್ಲೆಯಲ್ಲಿ ನವಲಗುಂದ ತಾಲ್ಲೂಕಿಗೆ ಬದಲಾಗಿ ಹುಬ್ಬಳ್ಳಿ, ಹಾವೇರಿ ಜಿಲ್ಲೆಯಲ್ಲಿ ರಾಣಿಬೆನ್ನೂರು ತಾಲ್ಲೂಕಿಗೆ ಬದಲಾಗಿ ಸವಣೂರಿನಲ್ಲಿ ಉಪ ಕೃಷಿ ನಿರ್ದೇಶಕರು–2ರ ಕೇಂದ್ರ ಸ್ಥಾನವನ್ನು ನಿಗದಿಪಡಿಸಲು ಹಾಗೂ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಹಾಗೂ ಇತರೇ ದೈನಂದಿನ ಕೆಲಸಗಳ ಹಿತದೃಷ್ಟಿಯಿಂದ ಅನುಬಂಧದಲ್ಲಿರುವಂತೆ ಉಪ ಕೃಷಿ ನಿರ್ದೇಶಕರು–1 ಮತ್ತು 2 ಕಛೇರಿಗಳ ಕೇಂದ್ರಸ್ಥಾನ ಹಾಗೂ ಅವುಗಳ ಕಾರ್ಯವ್ಯಾಪ್ತಿಗೆ ಬರುವ ತಾಲ್ಲೂಕುಗಳನ್ನು ನಿಗದಿಪಡಿಸಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಮೇಲೆ (2)ರಲ್ಲಿ ಓದಲಾದ ದಿನಾಂಕ:01–10–2014ರ ಪತ್ರದಲ್ಲಿ ಕೃಷಿ ಆಯುಕ್ತರು ಪ್ರಸ್ತಾವಿಸಿರುತ್ತಾರೆ.

**2)** ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, 04 ಉಪ ಕೃಷಿ ನಿರ್ದೇಶಕರು–2ರ ಕೇಂದ್ರ ಸ್ಥಾನವನ್ನು ಕಂದಾಯ ಉಪವಿಭಾಗದಲ್ಲಿ ನಿಗದಿಪಡಿಸಲು ಹಾಗೂ ಉಪ ಕೃಷಿ ನಿರ್ದೇಶಕರು–1 ಮತ್ತು ಉಪ ಕೃಷಿ ನಿರ್ದೇಶಕರು–2ರವರ ಕಾರ್ಯವ್ಯಾಪ್ತಿಗೆ ಒಳಪಡುವ ತಾಲ್ಲೂಕುಗಳನ್ನು ನಿಗಧಿಪಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 178 ಕೃಪಸೇ 2014,**

**ಬೆಂಗಳೂರು, ದಿನಾಂಕ:03–12–2014.**

**3)** ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರದ ಆದೇಶ ಸಂಖ್ಯೆ; ಕೃಇ 166 ಕೃಪಸೇ 2014,ದಿನಾಂಕ;08–07–2014ರ ಆದೇಶದ ಅನುಬಂಧ–III(C)ನಲ್ಲಿ,22 ಉಪ ಕೃಷಿ

ನಿರ್ದೇಶಕರು–2ರವರ ಕಛೇರಿಗಳ ಪೈಕಿ ಈ ಕೆಳಕಂಡ 4 ಜಿಲ್ಲೆಗಳಲ್ಲಿರುವ ಕೇಂದ್ರಸ್ಥಾನವನ್ನು ಅವುಗಳ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಿಗೆ ಮರುನಿಗಧಿಪಡಿಸಿದೆ.

1) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳಕ್ಕೆ ಬದಲಾಗಿ, ಇಂಡಿ.
2) ದಾವಣಗೆರೆ ಜಿಲ್ಲೆಯ ಚನ್ನಗಿರಿ ಬದಲಾಗಿ, ಹರಪನಹಳ್ಳಿ.
3) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಬದಲಾಗಿ, ಪುತ್ತೂರು.
4) ಧಾರವಾಡ ಜಿಲ್ಲೆಯ ನವಲಗುಂದ ಬದಲಾಗಿ, ಹುಬ್ಬಳ್ಳಿ.

**4)** ಹಾಗೂ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಹಾಗೂ ಇತರೆ ದೈನಂದಿನ ಕೆಲಸ ಕಾರ್ಯಗಳ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಉಪ ಕೃಷಿ ನಿರ್ದೇಶಕರು–1 ಹಾಗೂ ಉಪ ಕೃಷಿ ನಿರ್ದೇಶಕರು–2ರವರ ಕೇಂದ್ರಸ್ಥಾನ ಹಾಗೂ ಕಾರ್ಯವ್ಯಾಪಿಗೆ ಒಳಪಡುವ ತಾಲ್ಲೂಕುಗಳನ್ನು ಕ್ರಮವಾಗಿ ಅನುಬಂಧ–1 ಹಾಗೂ 2ರಲ್ಲಿ ನಿಗದಿಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:–

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ– ಮುಂದಿನ ವಾರದ ಪತ್ರಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ ನೂರು ಪ್ರತಿಯನ್ನು ಸರ್ಕಾರಕ್ಕೆ ಒದಗಿಸುವಂತೆ ಕೋರಿದೆ.

ಪ್ರತಿ

1) ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು–1.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4) ಎಲ್ಲಾ ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರು1 ಮತ್ತು 2 ರವರುಗಳಿಗೆ. (ಆಯುಕ್ತರು, ಕೃಷಿ ಇಲಾಖೆ ಇವರ ಮೂಲಕ)
5) ಸರ್ಕಾರದ ಉಪ ಕಾರ್ಯದರ್ಶಿ–1 ಮತ್ತು 2, ಕೃಷಿ ಇಲಾಖೆ,
6) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಅನುಬಂಧ–1

(ಸರ್ಕಾರದ ಆದೇಶ ಸಂಖ್ಯೆ: ಕೃಇ 178 ಕೃಪಸೇ 2014, ಬೆಂಗಳೂರು, ದಿನಾಂಕ:03–12–2014)

ಉಪ ಕೃಷಿ ನಿರ್ದೇಶಕರು–1 ಕಛೇರಿಗಳ ಕೇಂದ್ರಸ್ಥಾನ ಮತ್ತು ಕಛೇರಿ ವ್ಯಾಪ್ತಿಯ ವಿವರಗಳು.

| ಕ್ರ. ಸಂ | ಜಿಲ್ಲೆಯ ಹೆಸರು | ಕೇಂದ್ರಸ್ಥಾನ | ಕಾರ್ಯವ್ಯಾಪ್ತಿಗೆ ಬರುವ ತಾಲ್ಲೂಕುಗಳು |
|---|---|---|---|
| 1 | ಬೆಂಗಳೂರು ನಗರ / ಗ್ರಾಮಾಂತರ | ಬೆಂಗಳೂರು | ಆನೇಕಲ್/ಬೆಂಗಳೂರು(ದ), ಬೆಂಗಳೂರು ಉತ್ತರ/ಬೆಂಗಳೂರು(ಪೂ) ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, |
| 2 | ರಾಮನಗರ | ರಾಮನಗರ | ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ |
| 3 | ಕೋಲಾರ | ಕೋಲಾರ | ಕೋಲಾರ, ಮಾಲೂರು, ಬಂಗಾರುಪೇಟೆ |
| 4 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ |
| 5 | ತುಮಕೂರು | ತುಮಕೂರು | ತುಮಕೂರು, ಕುಣಿಗಲ್, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ |
| 6 | ಚಿತ್ರದುರ್ಗ | ಚಿತ್ರದುರ್ಗ | ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ |
| 7 | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, |
| 8 | ದಾವಣಗೆರೆ | ದಾವಣಗೆರೆ | ದಾವಣಗೆರೆ, ಚನ್ನಗಿರಿ, ಹರಿಹರ, ಹೊನ್ನಾಳಿ |
| 9 | ಮಂಡ್ಯ | ಮಂಡ್ಯ | ಮಂಡ್ಯ, ಮದ್ದೂರು, ಮಳವಳ್ಳಿ |
| 10 | ಮೈಸೂರು | ಮೈಸೂರು | ಮೈಸೂರು,ನಂಜನಗೂಡು, ಟಿ.ನರಸೀಪುರ |
| 11 | ಚಾಮರಾಜ ನಗರ | ಚಾಮರಾಜ ನಗರ | ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ |
| 12 | ಕೊಡಗು | ಮಡಿಕೇರಿ | ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ |
| 13 | ದಕ್ಷಿಣ ಕನ್ನಡ | ಮಂಗಳೂರು | ಮಂಗಳೂರು, ಭಂಟ್ವಾಳ |
| 14 | ಉಡುಪಿ | ಉಡುಪಿ | ಉಡುಪಿ, ಕಾರ್ಕಳ, ಕುಂದಾಪುರ |
| 15 | ಹಾಸನ | ಹಾಸನ | ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ |
| 16 | ಚಿಕ್ಕಮಗಳೂರು | ಚಿಕ್ಕಮಗಳೂರು | ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ಕೊಪ್ಪ |
| 17 | ಹಾವೇರಿ | ಹಾವೇರಿ | ಹಾವೇರಿ, ಹಾನಗಲ್, ಸವಣೂರು ಶಿಗ್ಗಾವಿ. |
| 18 | ಗದಗ | ಗದಗ | ಗದಗ, ಶಿರಹಟ್ಟಿ, ಮುಂಡರಗಿ |
| 19 | ಧಾರವಾಡ | ಧಾರವಾಡ | ಧಾರವಾಡ, ಕಲಘಟಗಿ |
| 20 | ಉತ್ತರ ಕನ್ನಡ | ಕಾರವಾರ | ಕಾರವಾರ, ಹಳಿಯಾಳ, ಜೋಯಿಡಾ, ಅಂಕೋಲಾ, ಯಲ್ಲಾಪುರ |
| 21 | ಬೆಳಗಾವಿ | ಬೆಳಗಾವಿ | ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ |
| 22 | ಬಾಗಲಕೋಟೆ | ಬಾಗಲಕೋಟೆ | ಬಾಗಲಕೋಟೆ, ಬಾದಾಮಿ, ಹುನಗುಂದ |
| 23 | ಬಿಜಾಪು ರ | ಬಿಜಾಪುರ | ಬಿಜಾಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳ |
| 24 | ಬಳ್ಳಾರಿ | ಬಳ್ಳಾರಿ | ಬಳ್ಳಾರಿ, ಸಿರಗುಪ್ಪ, ಸಂಡೂರು |
| 25 | ರಾಯಚೂರು | ರಾಯಚೂರು | ರಾಯಚೂರು, ಮಾನ್ವಿ, ದೇವದುರ್ಗ |
| 26 | ಕೊಪ್ಪಳ | ಕೊಪ್ಪಳ | ಕೊಪ್ಪಳ, ಯಲ್ಬುರ್ಗಾ, ಕುಷ್ಟಗಿ, ಗಂಗಾವತಿ |
| 27 | ಯಾದಗಿರಿ | ಯಾದಗಿರಿ | ಯಾದಗಿರಿ, ಶಹಾಪುರ, ಸುರಪುರ |
| 28 | ಗುಲ್ಬರ್ಗಾ | ಗುಲ್ಬರ್ಗಾ | ಗುಲ್ಬರ್ಗಾ, ಜೇವರ್ಗಿ, ಅಫಜಲಪುರ, ಅಳಂದ |
| 29 | ಬೀದರ್ | ಬೀದರ್ | ಬೀದರ್, ಔರಾದ್ |

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿಇಲಾಖೆ(ಸೇವೆಗಳು ಮತ್ತು ಸಮನ್ವಯ)

<u>ಅನುಬಂಧ-2</u>

<u>(ಸರ್ಕಾರದ ಆದೇಶ ಸಂಖ್ಯೆ: ಕೃಇ 178 ಕೃಪಸೇ 2014, ಬೆಂಗಳೂರು, ದಿನಾಂಕ:03-12-2014)</u>

ಉಪ ಕೃಷಿ ನಿರ್ದೇಶಕರು-2 ಕಛೇರಿಗಳ ಕೇಂದ್ರಸ್ಥಾನ ಮತ್ತು ಕಛೇರಿ ವ್ಯಾಪ್ತಿಯ ವಿವರಗಳು.

| ಕ್ರ. ಸಂ | ಜಿಲ್ಲೆಯ ಹೆಸರು | ಕೇಂದ್ರಸ್ಥಾನ | ಕಾರ್ಯ ವ್ಯಾಪ್ತಿಗೆ ಬರುವ ತಾಲ್ಲೂಕುಗಳು |
|---|---|---|---|
| 1 | ತುಮಕೂರು | ಮಧುಗಿರಿ | ಮಧುಗಿರಿ, ಪಾವಗಡ, ಶಿರಾ, ಕೊರಟಗೆರೆ |
| 2 | ಕೋಲಾರ | ಶ್ರೀನಿವಾಸಪುರ | ಶ್ರೀನಿವಾಸಪುರ, ಮುಳಬಾಗಿಲು |
| 3 | ಚಿಕ್ಕಬಳ್ಳಾಪುರ | ಚಿಂತಾಮಣಿ | ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ |
| 4 | ದಾವಣಗೆರೆ | ಹರಪನಹಳ್ಳಿ | ಹರಪನಹಳ್ಳಿ, ಜಗಳೂರು |
| 5 | ಚಿತ್ರದುರ್ಗ | ಚಳ್ಳಕೆರೆ | ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು |
| 6 | ಶಿವಮೊಗ್ಗ | ಸಾಗರ | ಸಾಗರ, ಶಿಕಾರಿಪುರ, ಹೊಸನಗರ, ಸೊರಬ |
| 7 | ದಕ್ಷಿಣ ಕನ್ನಡ | ಪುತ್ತೂರು | ಬೆಳ್ತಂಗಡಿ, ಸುಳ್ಯ, ಪುತ್ತೂರು |
| 8 | ಚಿಕ್ಕಮಗಳೂರು | ತರೀಕೆರೆ | ತರೀಕೆರೆ, ಕಡೂರು, ಎನ್.ಆರ್.ಪುರ |
| 9 | ಹಾಸನ | ಸಕಲೇಶಪುರ | ಸಕಲೇಶಪುರ, ಆಲೂರು, ಅರಕಲಗೂಡು, ಬೇಲೂರು. |
| 10 | ಮೈಸೂರು | ಹುಣಸೂರು | ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ |
| 11 | ಮಂಡ್ಯ | ಪಾಂಡವಪು ರ | ಪಾಂಡವಪುರ, ಕೆ.ಆರ್.ಪೇಟೆ, ನಾಗಮಂಗಲ, ಶ್ರೀರಂಗಪಟ್ಟಣ |
| 12 | ಬಿಜಾಪುರ | ಇಂಡಿ | ಇಂಡಿ, ಸಿಂಧಗಿ |
| 13 | ಬಾಗಲಕೋಟೆ | ಜಮಖಂಡಿ | ಜಮಖಂಡಿ, ಮುಧೋಳ, ಬೀಳಗಿ |
| 14 | ಬೆಳಗಾವಿ | ಚಿಕ್ಕೋಡಿ | ಚಿಕ್ಕೋಡಿ, ಹುಕ್ಕೇರಿ, ರಾಯಭಾಗ್, ಅಥಣಿ, ಗೋಕಾಕ್. |
| 15 | ಧಾರವಾಡ | ಹುಬ್ಬಳ್ಳಿ | ಹುಬ್ಬಳ್ಳಿ, ನವಲಗುಂದ, ಕುಂದಗೋಳ |
| 16 | ಗದಗ | ರೋಣ | ರೋಣ, ನರಗುಂದ |
| 17 | ಉತ್ತರ ಕನ್ನಡ | ಸಿರ್ಸಿ | ಸಿರ್ಸಿ, ಕುಮಟಾ, ಹೊನ್ನಾವರ, ಭಟ್ಕಳ, ಸಿದ್ದಾಪುರ, ಮುಂಡಗೋಡ |
| 18 | ಹಾವೇರಿ | ರಾಣಿಬೆನ್ನೂರು, | ರಾಣಿಬೆನ್ನೂರು, ಹಿರೇಕೆರೂರು, ಬ್ಯಾಡಗಿ, |
| 19 | ಬೀದರ್ | ಬಸವಕಲ್ಯಾಣ | ಬಸವಕಲ್ಯಾಣ, ಭಾಲ್ಕಿ, ಹುಮ್ನಾಬಾದ್ |
| 20 | ಗುಲ್ಬರ್ಗಾ | ಸೇಡಂ | ಸೇಡಂ, ಚಿಂಚೋಳಿ, ಚಿತ್ತಾಪುರ |
| 21 | ರಾಯಚೂರು | ಲಿಂಗಸಗೂರು | ಲಿಂಗಸಗೂರು, ಸಿಂಧನೂರು |
| 22 | ಬಳ್ಳಾರಿ | ಹೊಸಪೇಟೆ | ಹೊಸಪೇಟೆ, ಕೂಡ್ಲಿಗಿ, ಹಡಗಲಿ, ಹಗರಿಬೊಮ್ಮನಹಳ್ಳಿ |

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)